ರಾಜ್ಯದಲ್ಲಿ ರೈತರು ಬೆಳೆದ ಕಬ್ಬಿನ ಮಾರಾಟ

6115 (2058) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ರೈತರು ತಾವು ಬೆಳೆದ ಕಬ್ಬನ್ನು ವಿವಿಧ ಸಕ್ಕರೆ ಕಾರ್ಖಾನೆಗಳಿಗೆ ಮಾರಾಟ ಮಾಡಲು ತೆಗೆದುಕೊಂಡು ಹೋದಾಗ, ಕಬ್ಬನ್ನು ಬೆಳೆದ ರೈತರಿಗೆ ಅವರ ಪ್ರತಿನಿಧಿಗಳಿಗೆ ತೂಕ ಮಾಡುವ ಸ್ಥಳದಲ್ಲಿ ಉಪ ಸ್ಥಿತರಿರಲು ಅವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

2) ಬಂದಿದ್ದಲ್ಲಿ, ಇದರಿಂದ ಕಬ್ಬು ಬೆಳೆದ ರೈತರಿಗೆ ಅವರ ಪ್ರತಿನಿಧಿಗಳಿಗೆ ತೂಕ ಮಾಡುವ ಸಮಯದಲ್ಲಿ ಉಪಸ್ಥಿತರಿರಲು ಅವಕಾಶ ಕಲ್ಪಿಸಲಾಗುವುದೇ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

1) ಬಂದಿರುವುದಿಲ್ಲ. ಆದರೆ ರೈತರು ತಾವು ಬೆಳೆದ ಕಬ್ಬನ್ನು ಮಾರಾಟ ಮಾಡಲು ಸಕ್ಕರೆ ಕಾರ್ಖಾನೆಗಳಿಗೆ ತೆಗೆದುಕೊಂಡು ಹೋದಾಗ ಅವರಿಗೆ: ಅವರ ಪ್ರತಿನಿಧಿಗಳಿಗೆ ತೂಕ ಮಾಡುವ ಸ್ಥಳದಲ್ಲಿ ಉಪಸ್ಥಿತರಿದ್ದು ನೋಡಲು ಯಾವುದೇ ನಿರ್ಭಂದವಿರುವುದಿಲ್ಲ.

2) ಇದುವರೆಗೂ ಅಂತಹ ಯಾವುದೇ ದೂರುಗಳು ಬಂದಿರುವುದಿಲ್ಲ. ಒಂದು ವೇಳೆ ಬಂದಲ್ಲಿ, ಸಂಬಂಧಪಟ್ಟ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ನೌಕರರು

6118 (2055) ಶ್ರೀ ಸೋಮಶೇಖರ್ ಬಿ. (ಮಳವಳ್ಳಿ): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) ಜಿ.ಟಿ.ಟಿ.ಸಿ. ಯಲ್ಲಿ ರೋಸ್ಟರ್ ಪದ್ಧತಿಯನ್ನು ಯಾವ ದಿನಾಂಕದಿಂದ ಪ್ರಾರಂಭಿಸಲಾಗಿದೆ;

ಇ) ಜಿ.ಟಿ.ಟಿ.ಸಿ. ಯಲ್ಲಿ ಬಡ್ತಿಗಾಗಿ ಬ್ಯಾಕ್‌ಲಾಗ್ ಹುದ್ದೆಗಳು ಎಷ್ಟು;

ಈ) ಈ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 528. ಸೇವೆ ಸಲ್ಲಿಸಿರುವ ನೌಕರರ ವೃಂದದ ವಿವರವನ್ನು ಅನುಬಂಧ-ಅರಲ್ಲಿ ಲಗತ್ತಿಸಲಾಗಿದೆ.

ಆ) 29-6-2001 ರಿಂದ ರೋಸ್ಟರ್ ಪದ್ಧತಿಯನ್ನು ಪ್ರಾರಂಭಿಸಲಾಗಿದೆ. ಇದರ ಪ್ರಕಾರ ಭರ್ತಿ ಮಾಡಬೇಕಿದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಎಲ್ಲಾ ವಿವರಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ತಿಳಿಸಿದೆ.

ಇ) ಪರಿಶಿಷ್ಟ ಜಾತಿ : 15

ಪರಿಶಿಷ್ಟ ಪಂಗಡ : 10

ಈ) ಈ ಹುದ್ದೆಗಳಿಗೆ ಬಡ್ತಿ ನೀಡಲು ಅರ್ಹ ಅಭ್ಯರ್ಥಿಗಳು ಸದ್ಯಕ್ಕೆ ಯಾರು ಇಲ್ಲ. ಅರ್ಹತೆ ಹೊಂದಿದ ನಂತರ ಬಡ್ತಿಗಳನ್ನು ನೀಡಲಾಗುವುದು.

ಎಲ್ಲಾ ವಿವರಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ನೀಡಿದೆ.

LAQ No. 2055

Annexure-A

List 528 As on 12-3-2003 Design-Alphabetical Wise

Sl. No.	Designation	Strength
1.	Admn Manager i/c	1
2.	Assustant Gr-I	8
3.	Assistant Gr-II	43
4.	Assistant Gr-III	24
5.	Asst. Manager	20
6.	Ast. Professor	1
7.	Asst. Admn. Officer	1
8.	Attender	4
9.	Driver	9
10.	Dy. Manager	14
11.	Dy. Gen. Manager	7
12.	Engineer	17
13.	Foreman Gr. I	4
14.	Foreman Gr. II	24
15.	Gardener	4
16.	General Manager	3
17.	Guard	5
18.	Instructor Gr. I	48
19.	Instructor Gr. II	15
20.	Instructor Gr. III	1
21.	Jr. Foreman	7
22.	Lecturer Gr. II	1
23.	Lecturer	8

1	2	3
24.	Manager	0
25.	Officer Gr. I	1
26.	Officer Gr. II	5
27.	Officer Gr. III	6
28.	PCW	2
29.	Principal Gr. I	2
30.	Principal Gr. II	1
31.	Principal Gr. III	3
32.	Principal Gr. IV	2
33.	Sr. Attender	4
34.	Sr. Driver	1
35.	Sr. Guard	9
36.	Sr. Murt Handler	1
37.	Sr. Sweeper	2
38.	Sr. Manager	1
39.	Sweeper	5
40.	Technician Gr. I	20
41.	Technician Gr. II	27
42.	Technician Gr. III	60
43.	Technician Gr. IV	97
44.	VCMD	1
	Total	**528**

ಸಿಂಧಗಿ ತಾಲ್ಲೂಕಿನ ನಿರಾಶ್ರಿತರಿಗೆ ಮನೆಗಳು

1619 (2034) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) 2000-01ನೇ ಸಾಲಿನಲ್ಲಿ ಸಿಂಧಗಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರಾಶ್ರಿತರಿಗೆ ಮಂಜೂರಾದ ಮನೆಗಳು ಎಷ್ಟು; ಮಂಜೂರು ಮಾಡಿದೆ ಇದ್ದರೆ ಮಂಜೂರು ಮಾಡುವುದು ಯಾವಾಗ?

2) ಸಿಂಧಗಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರಾಶ್ರಿತರ ಬಗ್ಗೆ ಸರ್ಕಾರ ಮಾಹಿತಿ ಸಂಗ್ರಹಿಸಿದೆಯೇ?

3) ಮಾಹಿತಿ ಸಂಗ್ರಹಿಸಿದ್ದರೆ ಅಂತಹ ನಿರಾಶ್ರಿತರ ಸಂಖ್ಯೆ ಎಷ್ಟು?